



# 5 ಕೈಯಲ್ಲೇ ಕಲೆ

**"ಕೈ ಕಸಬು ಒಂದನ್ನು ಕಲಿತುಕೋ**
**ಚಿಂತೆ ನಿನಗಿಲ್ಲ ಎಂದು ಒಪ್ಪಿಕೋ"**

ಕರಕುಶಲ/ ಕೈ ಕಸಬು ಎಂಬುದು ವಿಶೇಷ ಕೌಶಲ್ಯವನ್ನು ಹೊಂದಿದ ಒಂದು ವೃತ್ತಿ. ನಿನಗೆ ತಿಳಿದ ಕರಕುಶಲ ವಸ್ತುಗಳಲ್ಲಿ ಕೆಲವನ್ನು ಪಟ್ಟಿಮಾಡಿ.



ತಮಿಳು ನಾಡಿನಲ್ಲಿ ನಾವು ನಮ್ಮ ಪ್ರತಿನಿತ್ಯದ ಜೀವನದಲ್ಲಿ ಉಪಯೋಗಿಸುವಂತಹ ವಸ್ತುಗಳಲ್ಲಿಯೂ, ನಮ್ಮ ಜೀವನಕ್ಕೆ ಅವಶ್ಯಕವಾದ ವಸ್ತುಗಳಲ್ಲಿಯೂ ಅನೇಕ ಕರಕುಶಲ ವಸ್ತುಗಳು ಇವೆ. ಪ್ರಾಚೀನ ಕಾಲದಿಂದಲೇ ತಮಿಳುನಾಡು ಕೈ ಕಸಬು ಮತ್ತು ಕಲಾ ವಸ್ತುಗಳ ಉತ್ಪಾದನೆಯಲ್ಲಿ ವಿಶೇಷ ಪಾತ್ರವಹಿಸಿದೆ. ಈ ವಸ್ತುಗಳು ನಮ್ಮ ಸಂಸ್ಕೃತಿ ಮತ್ತು ಆಚಾರಗಳನ್ನು ಪ್ರತಿಬಿಂಬಿಸುತ್ತದೆ. ಅದು ಮಾತ್ರವಲ್ಲದೆ ಗ್ರಾಮಗಳಲ್ಲಿ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವಂತೆಯೂ ಕೂಡಿದೆ. ಇದು ವಿಶ್ವದ್ಯಾಂತ ಹೆಸರುವಾಸಿಯಾಗಿ ಪ್ರಖ್ಯಾತಿ ಹೊಂದಿದೆ. ನಾವು ಪ್ರತಿನಿತ್ಯ ಬಳಸುವಂತಹ ಅನೇಕ ಕುಶಲ ಕೈಗಾರಿಕೆ ವಸ್ತುಗಳು ಪ್ರಾಕೃತಿಕವಾಗಿ ಸಿಗುವಂತಹ ವಸ್ತುಗಳಿಂದ ತಯಾರಿಸಿದುದಾಗಿದೆ.

## ಪಣೆಗರಿಗಳಿಂದ ತಯಾರಿಸಲ್ಪಡುವ ವಸ್ತುಗಳು :


ಪಣಿಎಲೆ


ತಟ್ಟೆಗಳು

ಗೂಡೆಗಳು


ಕೈ ಚೀಲಗಳು


ಪ್ರಾಚೀನ ಕಾಲದಲ್ಲಿ ಕಾಗದ ಕಂಡು ಹಿಡಿಯುವುದಕ್ಕೆ ಮೊದಲೆ ನಮ್ಮ ಹಿರಿಯರು ಪಣಮರದ ಗರಿಗಳಂದ ತಯಾರಿಸಿದ ಓಲೆಗರಿಗಳನ್ನು ಉಪಯೋಗಿಸಿದರು. ಪರಿಸರ ಮಾಲಿನ್ಯ ಏರ್ಪಡದಂತೆ ನೈಸರ್ಗಿಕ ವಸ್ತುಗಳನ್ನು ಬಳಸಿಕೊಂಡೆ ಕುಶಲ ಕೈಗಾರಿಕೆ ವಸ್ತುಗಳನ್ನು ತಯಾರಿಸಿದರು.

**ತೆಂಗು :**







ನಾರು



ಹಗ್ಗ



ಕಪ್ಪುಗಳು



ಪೊರಕೆ



ಕರಕುಶಲ ವಸ್ತುಗಳು

ಈಗಲೂ ಇಂತಹ ವಸ್ತುಗಳನ್ನು ತಯಾರಿಸುವವರು ಇದ್ದಾರೆ. ನಮ್ಮ ಮನೆಗೆ ಕಸಬರಿಕೆ (ಪೊರಕೆ), ಕಸದ ಬುಟ್ಟಿ, ಹಗ್ಗ ಮತ್ತು ಕಲಾಕಾರನ ಕುಂಚ (ತೂಲಿಕೆ) ಮುಂತಾದವು ಬೇಕಾಗುತ್ತದೆ. ಈ ಕರಕುಶಲ ವಸ್ತುಗಳು ಇಲ್ಲದಿದ್ದರೆ ನಮ್ಮ ಜೀವನ ಕಠಿಣವಾಗಿ ಇರುತ್ತದೆ.


ಟಿಕ್...ಟಿಕ್... ಟಿಕ್... ತಯಾರಿಸೋಣವಾ?

ಬೇಕಾದ ವಸ್ತುಗಳು

3 ತೆಂಗಿನ ಕಡ್ಡಿಗಳು .

1 ತೆಂಗಿನ ಕುರುಭ .

ಚಿತ್ರದಲ್ಲಿ ತೋರಿಸಿರುವಂತೆ ಕಡ್ಡಿಗಳನ್ನು ಬಗ್ಗಿಸಿ ತೆಂಗಿನ ಕುರುಬೆಗೆ ಚುಚ್ಚಬೇಕು. ನಂತರ ಅಲುಗಾಡಿಸಿ ಸುತ್ತಿಸಿ ನೋಡಿ, ಟಿಕ್ ಟಿಕ್ ಶಬ್ದ ಕೇಳಸುತ್ತದೆ.



## ಬಿದರಿನಿಂದ ತಯಾರಿಸಲ್ಪಡುವ ಕರಕುಶಲ ವಸ್ತುಗಳು.













ನಮ್ಮ ತಮಿಳುನಾಡಿನಲ್ಲಿ ಅನೇಕ ಕರಕುಶಲ ವಸ್ತುಗಳು ಬಿದಿರನ್ನು ಬಳಸಿ ತಯಾರಿಸಲ್ಪಡುತ್ತದೆ. ಬಿದಿರು ವೇಗವಾಗಿ ಬೆಳೆಯುವ ಒಂದು ಸಸ್ಯ. 24 ಗಂಟೆಗಳಲ್ಲಿ ಸುಮಾರು ಮೂರು ಅಡಿ ಉದ್ದದ ವರೆಗೆ ಬೆಳೆಯುತ್ತದೆ. ಪ್ರಾಚೀನ ಕಾಲದ ಕಲೆಯಾದ ದೊಣ್ಣೆವರಿಸೆ ಬಿದಿರಿನ ದೊಣ್ಣೆಗ ಳನ್ನು ಬಳಸಿಯೆ ಅಭ್ಯಾಸ ತರಬೇತಿ ನೀಡಲಾಗುತ್ತದೆ. ಇಂಪಾದ ಸಂಗೀತವನ್ನು ತರುವ ಕೊಳಲುಗಳು ಬಿದರಿನಿಂದ ತಯಾರಿಸಲಾಗುತ್ತದೆ.


## ಬೆತ್ತ ಮತ್ತು ಅನೇಕ ಬಗೆಯ ಹುಲ್ಲುಗಳಿಂದ ತಯಾರಿಸುವ ವಸ್ತುಗಳು :















ಸುಂದರವಾದ ಹುಲ್ಲಿನ ಚಾಪೆಗಳನ್ನು ವಿಧ ವಿಧ ಬಗೆಯ ಹುಲ್ಲುಗಳಿಂದ ತಯಾರಿಸಲಾಗುತ್ತದೆ. ತಮಿಳುನಾಡಿನಲ್ಲಿ ಜವುಗು ನೆಲ ಭಾಗಗಳಲ್ಲೂ, ನದಿ ಬಯಲಿನ ಪ್ರದೇಶಗಳಲ್ಲಿಯೂ ಬೇರ ಬೇರೆ ಜಾತಿಯ ಹುಲ್ಲುಗಳು ಹೆಚ್ಚಾಗಿ ಕಾಣಲ್ಪಡುತ್ತದೆ. ಪ್ರಾರಂಭದಲ್ಲಿ ಮೊದಲು ಚಾಪೆಗಳಿಗೆ ಕೆಂಪು ಮತ್ತು ಕಪ್ಪು ಬಣ್ಣಗಳನ್ನು ಮಾತ್ರ ಬಳಸುತ್ತಿದ್ದರು. ಈಗ ರಾಸಾಯನಿಕ ವಸ್ತುಗಳನ್ನು ಬಳಸಿ ಅನೇಕ ಬಗೆಯ ಬಣ್ಣಗಳನ್ನು ಪರಿಚಯ ಮಾಡಲಾಗಿದೆ. ತಿರುನಲ್‌ವೇಲಿಯ ಪತ್ತಮಡೈ ಚಾಪೆ ಬಹಳ ಪ್ರಸಿದ್ಧವಾದುದು. ತಮಿಳುನಾಡಿನ ಕೈ ಕಸುಬುದಾರರು, ಕರ ಕುಶಲಗಾರರು ಅನಾನಸು ಹಣ್ಣು ಮತ್ತು ಬಾಳೆ ನಾರುಗಳನ್ನು ಬಳಸಿ ಚಾಪೆ ನೇಯುತ್ತಾರೆ. ಧರ್ಮಪುರಿ, ಕೊಯಮತ್ತೂರು, ವೇಲೂರು ಮತ್ತು ತಿರುಚ್ಚಿ ಜಿಲ್ಲೆಗಳು ಕರಕುಶಲ ವಸ್ತುಗಳಿಗೆ ಬಹಳ ಪ್ರಸಿದ್ಧಿ ಪಡೆದಿವೆ.

## ಸೆಣಬಿನಿಂದ ತಯಾರಿಸಲ್ಪಡುವ ಕರಕುಶಲ ವಸ್ತುಗಳು






### ಜೇಡಿಮಣ್ಣು :



ಮೊದಲಿನಿಂದಲೆ ನಮ್ಮ ತಮಿಳುನಾಡಿನಲ್ಲಿ ಜೇಡಿಮಣ್ಣಿನಿಂದ ಮನೆಗಳನ್ನು ಕಟ್ಟಲಾಗುತ್ತಿತ್ತು.

ಸಾವಿರಾರು ವರ್ಷಗಳಗೂ ಮೊದಲಿನಿಂದಲೂ ತಮಿಳುನಾಡಿನಲ್ಲಿ ಇಟ್ಟಿಗೆಯನ್ನು ಬಳಸುತ್ತಾ ಬಂದಿದ್ದಾರೆ. ಇದೇ ಕರಕುಶಲಗಾರರು ಮೊದಮೊದಲು ತಯಾರಿಸಿದ ವಸ್ತುವಾಗಿದೆ.



ಮಣ್ಣು ಮಡಿಕೆಗಳ ವಿಶೇಷಗಳು ಅವುಗಳನ್ನು ತಯಾರಿಸುವ ವಿಧ, ಆಕಾರ, ಬಣ್ಣ ಹಾಗೂ ಕೆಲಸಗಳನ್ನು ಅನುಸರಿಸಿ ಕೊಂಡೆ ಇರುತ್ತದೆ. ವೇಲೂರಿನಲ್ಲಿ ದೊರೆಯುವ ಕೆಂಪು ಮತ್ತು ಕಪ್ಪು ಬಣ್ಣ ಮಿಶ್ರಿಣದಿಂದ ಕೂಡಿದ ಮಣ್ಣಿನಿಂದ ತಯಾರಾದ ವಸ್ತುಗಳು, ತಿರುನಲ್ವೇಲಿ ಜಿಲ್ಲೆಯ ಕಾರೈಕುಡಿಯಲ್ಲಿ ದೊರೆತ ಕಪ್ಪುಬಣ್ಣದ ಮಣ್ಣಿನ (ಪಾತ್ರೆ) ವಸ್ತುಗಳು ಅವುಗಳ ವಿಶೇಷತೆಗೆ ಹೆಸರುವಾಸಿಯಾಗಿವೆ.

### ಜೇಡಿಮಣ್ಣಿನಿಂದ ತಯಾರಿಸಲಾದ ವಸ್ತುಗಳು:








ತಂಜಾವೂರಿನಲ್ಲಿ ತಯಾರಿಸುವ ತಲೆಯಾಡಿಸುವ ಗೊಂಬೆ ತುಂಬಾ ಹೆಸರುವಾಸಿಯಾಗಿದೆ.